| O.S 42/2010 | DW-1 |
|---|---|

ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ 31.01.2026 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು:- ವಾದಿ ಪರ ವಕೀಲರಾದಃಶ್ರೀ PR ರವರಿಂದ:-**

ಚಾಮರಾಜನಗರ ತಾಲ್ಲೂಕು ಕಛೇರಿಯಿಂದ ನೀಡಿರುವಂತಹ ವಂಶವೃಕ್ಷವನ್ನು ನಾನು ಹಾಜರು ಮಾಡಿರುವುದಿಲ್ಲ ಸಾಕ್ಷಿಯು ಮುಂದುವರೆದು ಮೈಸೂರು ವಿದ್ಯಾರಣ್ಯಪುರದ ಕಛೇರಿಯಿಂದ ನೀಡಿರುವ ವಂಶವೃಕ್ಷವನ್ನು ಕೊಟ್ಟಿರುತ್ತೇನೆ. ಮೈಸೂರು ಕಛೇರಿಯಲ್ಲಿ ಕೊಟ್ಟಿರುವಂತಹ ವಂಶವೃಕ್ಷದಲ್ಲಿರುವ ಬಸಪ್ಪ ಮತ್ತು ಚಾಮರಾಜನಗರ ತಾಲ್ಲೂಕು ಆಲ್ದೂರು ಗ್ರಾಮದಲ್ಲಿರುವ ಬಸಪ್ಪರವರು ಬೇರೆ ಬೇರೆ ಎಂದರೆ ಸರಿಯಲ್ಲ. ಸದರಿ ಬಸಪ್ಪ ಬೇರೆ ಬೇರೆ ಆಗಿರುವುದು ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 10.01.1971 ರಲ್ಲಿ ಭೋಗ್ಯ ತೀರುವಳಿ ಆಗಿರುತ್ತದೆ. ಸಿದ್ದರಾಜಪ್ಪನವರ ಹೆಂಡತಿ ಸುಬ್ಬಮ್ಮ ಮತ್ತು ಅವರ ಮಗ ಭೋಗ್ಯ ಪತ್ರದಲ್ಲಿ ತೀರುವಳಿ ಆಗಿರುತ್ತದೆ ಎಂದು ಒಕ್ಕಣೆ ಮಾಡಿ ರೂ.200/- ಗಳನ್ನು ಪಡೆದು ಬಿಡುಗಡೆ ಮಾಡಿಕೊಟ್ಟಿರುತ್ತಾರೆ. ನೋಂದಣಿ ಅಧಿಕಾರಿಗಳ ಕಛೇರಿಯಲ್ಲಿ ಭೋಗ್ಯ ತೀರುವಳಿ ಆಗಿರುವುದಿಲ್ಲ. ಉಪ ನೋಂದಣಿ ಅಧಿಕಾರಿಗಳ ಕಛೇರಿಯಲ್ಲಿ ಭೋಗ್ಯ ತೀರುವಳಿ ಮಾಡಲು ತೊಂದರೆ ಇತ್ತೆ ಎಂದರೆ ಸಾಕ್ಷಿಯು ನನ್ನ ತಂದೆಯವರು ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಸುಬ್ಬಮ್ಮ ಮತ್ತು ಮಹದೇವಪ್ಪನವರು ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ, ಸೋಮಣ್ಣನವರು ಮೈನರ್ ಆಗಿರುವುದರಿಂದ ಅವರು ಸಹಿಯಾಗಲೀ ಹೆಬ್ಬೆಟ್ಟಿನ ಗುರುತಾಗಲೀ ಹಾಕಿರುವುದಿಲ್ಲ.

ಸಾಕ್ಷಿಗೆ ನಿಡಿ-23 ದಾಖಲಾತಿಯನ್ನು ತೋರಿಸಿದ್ದು ಅದರಲ್ಲಿ ಬರೆದಿರುವ ಒಕ್ಕಣೆಯನ್ನು ಓದಬೇಕೆಂದು ಪ್ರಶ್ನಿಸಿದ್ದು ಸಾಕ್ಷಿಯು ಓದಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ-23 ರಲ್ಲಿ ವಿಸ್ತೀರ್ಣ ಮತ್ತು ಸರ್ವೆ ನಂಬರ್ ಹಾಗೂ ಊರು ಕಾಣಿಸುತ್ತಿರುವುದಿಲ್ಲ ಎಂದರೆ ನಿಜ. ನಿಡಿ-23 ರಲ್ಲಿ ಯಾವ ತಾರೀಖು, ತಿಂಗಳು ಮತ್ತು ಇಸವಿಯಲ್ಲಿ ಭೋಗ್ಯ ಮಾಡಿದ್ದಾರೆ ಎಂಬುದು ಕಾಣುತ್ತಿಲ್ಲ ಎಂದರೆ ಸರಿ. ನಿಡಿ-23 ಕ್ಕೂ ಮತ್ತು ಈ ದಾವಾ ಆಸ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

| O.S 42/2010 | DW-1 |
|---|---|

ನಾವು ನಿಡಿ–23 ರ ಆಧಾರದ ಮೇಲೆ ಯಾವುದೇ ದಾವೆಯನ್ನು ಹಾಕಿರುವುದಿಲ್ಲ. ನಾನು ದಾವೆಯನ್ನು ಹೂಡುವ ಪ್ರಮೇಯವೇ ನನಗೆ ಬಂದಿರಲಿಲ್ಲ. ದಾವಾ ಆಸ್ತಿಯನ್ನು ಪ್ರಭುಸ್ವಾಮಿಯವರಿಂದ ಹೊಡೆದುಕೊಳ್ಳಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಆಲ್ದೂರು ಬಸಪ್ಪನವರಿಗೆ ಒಬ್ಬರೇ ಹೆಂಡತಿ ಪುಟ್ಟಮ್ಮ ಮತ್ತು ಒಬ್ಬ ಮಗ ಶಿವಣ್ಣ ಇರುತ್ತಾರೆ. ಸದರಿ ಆಲ್ದೂರು ಬಸಪ್ಪನವರಿಗೆ ಪುಟ್ಟಮ್ಮ ಮತ್ತು ಶಿವಣ್ಣ ಎಂಬ ಹೆಂಡತಿ ಮಕ್ಕಳು ಇರುವುದಿಲ್ಲ ಎಂದರೆ ಸರಿಯಲ್ಲ. ಆಲ್ದೂರು ಗ್ರಾಮದಲ್ಲಿ ನಮಗೆ ಸಂಬಂಧಿಕರು ಇದ್ದಾರೆ. ನನಗೆ ಆಲ್ದೂರಿನಲ್ಲಿ ಚಿನ್ನಬುದ್ದಿ ಮತ್ತು ಅವರ ಮಗ ರಾಜಶೇಖರ್ ಮತ್ತು ಬಸವಣ್ಣ ಎಂಬ ಸಂಬಂಧಿಕರು ಇದ್ದಾರೆ. ಚಿನ್ನಬುದ್ದಿ ಆಲ್ದೂರಿನವರು ಆಗಿರುವುದಿಲ್ಲ ಎಂದರೆ ಸಾಕ್ಷಿಯು ಆಲ್ದೂರಿನ ಚೇರ್ ಮೆನ್ ಆಗಿದ್ದರು ಎಂದು ನುಡಿಯುತ್ತಾರೆ.

ನನ್ನ ತಂದೆ ಬಸಪ್ಪನವರ ವಾರಸುದಾರರು ಆಗಿರುವುದಿಲ್ಲ ಎಂದರೆ ಸರಿಯಲ್ಲ.ದಾವಾ ಆಸ್ತಿಯಲ್ಲಿ ನಾನು ಸ್ವಾಧೀನದಲ್ಲಿ ಇರುವುದು ಸರಿಯಲ್ಲ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಭೋಗ್ಯ ತೀರುವಳಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ದಾಖಲಾತಿಗಳನ್ನು ಅಕ್ರಮವಾಗಿ ನನ್ನ ತಂದೆ ವಿದ್ಯಾವಂತರಾಗಿದ್ದ ಕಾರಣ ಮಾಡಿಕೊಂಡಿದ್ದರಿಂದ ಸುಳ್ಳು ದಾಖಲಾತಿಗಳನ್ನು ಸೃಷ್ಟಿಮಾಡಿಕೊಂಡಿದ್ದರಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ದಾವಾ ಆಸ್ತಿಯಲ್ಲಿ ನನಗಾಗಲೀ ಅಥವಾ ನನ್ನ ತಂದೆಗಾಗಲೀ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳ ಆಸ್ತಿಯನ್ನು ಹೊಡೆದುಕೊಳ್ಳುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ದಾಖಲಾತಿಗಳನ್ನು ನಾನು ಈ ದಾವೆಗಾಗಿ ಸೃಷ್ಟಿಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದ ನ್ಯಾಯಾಲಯ ಯಳಂದೂರು.